# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 227
2) ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 15-02-2023
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಾದ್ಯಂತ ಮುಂಗಾರು ಮಳೆ ಸತತವಾಗಿ ಸುರಿದಿದ್ದು ಹಲವಾರು ಜಿಲ್ಲೆಗಳಲ್ಲಿನ ಕೆರೆಗಳು ತುಂಬಿ, ಸದರಿ ಕೆರೆಗಳಿಗೆ ಮೀನುಗಾರಿಕೆ ಇಲಾಖೆ ಮೀನುಮರಿಗಳ ಸಾಕಾಣಿಕೆಯನ್ನು ನಡೆಸುತ್ತಿದ್ದು; ಸರ್ಕಾರವು ಈ ಯೋಜನೆಗೆ ನಿಗದಿಪಡಿಸಿದ ಅನುದಾನವೆಷ್ಟು; ಎಷ್ಟು ಕೆರೆಗಳಲ್ಲಿ ಇಲಾಖಾ ವತಿಯಿಂದ ಮೀನುಮರಿಗಳ ಸಾಕಾಣಿಕೆ ನಡೆಸುತ್ತಿವೆ;<br>(ಜಿಲ್ಲಾವಾರು ಮಾಹಿತಿ ಒದಗಿಸುವುದು) | ಇಲಾಖಾ ಕೆರೆಗಳಲ್ಲಿ ಮೀನುಮರಿಗಳ ಸಾಕಾಣಿಕೆಯನ್ನು ಗುತ್ತಿಗೆ, ಇ-ಟೆಂಡರ್ ಹಾಗೂ ಪರವಾನಗಿ ಮೂಲಕ ಮೀನು ಪಾಶುಪಾರು ಹಕ್ಕನ್ನು ಐದು ವರ್ಷಗಳಿಗೆ ವಿಲೇವಾರಿ ಮಾಡಲಾಗುತ್ತಿದೆ. ಗುತ್ತಿಗೆದಾರರು ಕೆರೆಗಳಲ್ಲಿ ಮೀನುಮರಿ ಬಿತ್ತನೆ ಮಾಡಿ, ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಮೀನುಗಾರರಿಗೆ ಪ್ರೋತ್ಸಾಹಿಸಲು ಮೀನುಮರಿ ಖರೀದಿಗೆ ಸಹಾಯಧನ, ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಮೀನುಮರಿ ಬಿತ್ತನೆ, ಕೆರೆಗಳ ಅಂಚಿನಲ್ಲಿ ಮೀನುಮರಿ ಪಾಲನೆ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಈ ಯೋಜನೆಗಳಿಗೆ 2022-23ನೇ ಸಾಲಿನಲ್ಲಿ ಒಟ್ಟು ಅನುದಾನ ರೂ.920.00 ಲಕ್ಷ ನಿಗಧಿಯಾಗಿದ್ದು, ಒಟ್ಟು ರೂ.607.00 ಲಕ್ಷ ವೆಚ್ಚವಾಗಿರುತ್ತದೆ. ಇಲಾಖಾ ವತಿಯಿಂದ ಮೀನುಗಾರಿಕೆಗೆ ವಿಲೇವಾರಿ ಮಾಡಿರುವ ಕೆರೆಗಳ ಜಿಲ್ಲಾವಾರು ಪಟ್ಟಿ **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ) | ಮೀನುಮರಿಗಳ ಸಾಕಾಣಿಕೆಯ ನಂತರದ ಮೀನುಗಳ ಮಾರಾಟದಿಂದ ಸರ್ಕಾರಕ್ಕೆ ಬಂದಿರುವ ಆದಾಯದ ಮೊತ್ತವೆಷ್ಟು?<br>(ಜಿಲ್ಲಾವಾರು ಮಾಹಿತಿ ನೀಡುವುದು) | ಮೀನುಮರಿಗಳ ಸಾಕಾಣಿಕೆಯ ನಂತರ ಸಂಬಂಧಪಟ್ಟ ಗುತ್ತಿಗೆದಾರರಿಗೆ / ಬಿಡ್‌ದಾರರಿಗೆ ಮೀನುಗಳ ಮಾರಾಟದಿಂದ ಆದಾಯವು ನೇರವಾಗಿ ಲಭಿಸುವುದರಿಂದ, ಸರ್ಕಾರಕ್ಕೆ ಯಾವುದೇ ಆದಾಯ ಲಭ್ಯವಾಗುವುದಿಲ್ಲ. |

ಸಂಖ್ಯೆ: ಪಸಂಮೀ ಇ-26 ಮೀಇಯೋ 2023

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

**ಅನುಬಂಧ-1**

**2022-23ನೇ ಸಾಲಿನ ಜಿಲ್ಲಾವಾರು ಮೀನುಗಾರಿಕೆ ಕೈಗೊಳ್ಳಲು ವಿಲೇವಾರಿ ಮಾಡಿರುವ ಮಾಹಿತಿ**

| ಕ್ರ.ಸಂ | ಜಿಲ್ಲೆ | ಕೆರೆಗಳ ಒಟ್ಟು ಸಂಖ್ಯೆ | ಗುತ್ತಿಗೆ | ಪರವಾನಗಿ | ಟೆಂಡರ್ ಕಂ ಹರಾಜು / ಇ-ಟೆಂಡರ್ | ಒಟ್ಟು ವಿಲೇವಾರಿ |
|---|---|---|---|---|---|---|
| 1 | ಬೆಂಗಳೂರು (ಗ್ರಾ) | 103 | 3 | 0 | 63 | 66 |
| 2 | ಚಿಕ್ಕಬಳ್ಳಾಪುರ | 214 | 6 | 0 | 111 | 117 |
| 3 | ಬೆಂಗಳೂರು (ನಗರ) | 196 | 65 | 0 | 77 | 142 |
| 4 | ಕೋಲಾರ | 146 | 9 | 0 | 80 | 89 |
| 5 | ರಾಮನಗರ | 124 | 22 | 0 | 55 | 77 |
| 6 | ತುಮಕೂರು | 401 | 34 | 0 | 209 | 243 |
| 7 | ಶಿವಮೊಗ್ಗ | 446 | 23 | 0 | 237 | 261 |
| 8 | ಚಿಕ್ಕಮಗಳೂರು | 128 | 4 | 0 | 48 | 52 |
| 9 | ಚಿತ್ರದುರ್ಗ | 169 | 4 | 0 | 67 | 71 |
| 10 | ದಾವಣಗೆರೆ | 94 | 24 | 0 | 41 | 65 |
| 11 | ಬೆಳಗಾವಿ | 221 | 7 | 0 | 80 | 87 |
| 12 | ಬಿಜಾಪುರ | 160 | 24 | 0 | 64 | 88 |
| 13 | ಧಾರವಾಡ | 128 | 1 | 0 | 7 | 8 |
| 14 | ಗದಗ | 42 | 7 | 0 | 5 | 12 |
| 15 | ಹಾವೇರಿ | 203 | 19 | 0 | 103 | 122 |
| 16 | ಬಾಗಲಕೋಟೆ | 47 | 20 | 0 | 17 | 37 |
| 17 | ಮೈಸೂರು | 98 | 36 | 0 | 46 | 82 |
| 18 | ಹಾಸನ | 178 | 12 | 0 | 110 | 122 |
| 19 | ಕೊಡಗು | 9 | 0 | 0 | 4 | 4 |
| 20 | ಮಂಡ್ಯ | 177 | 51 | 0 | 43 | 94 |
| 21 | ಚಾಮರಾಜನಗರ | 91 | 17 | 0 | 46 | 63 |
| 22 | ಬಳ್ಳಾರಿ | 100 | 15 | 0 | 36 | 51 |
| 23 | ಬೀದರ್ | 92 | 5 | 0 | 10 | 15 |
| 24 | ರಾಯಚೂರು | 80 | 12 | 0 | 13 | 25 |
| 25 | ಗುಲ್ಬರ್ಗಾ | 82 | 21 | 0 | 37 | 58 |
| 26 | ಯಾದಗಿರಿ | 74 | 3 | 0 | 37 | 40 |
| 27 | ಕೊಪ್ಪಳ | 52 | 4 | 0 | 8 | 12 |
| 28 | ವಿಜಯನಗರ | 83 | 0 | 0 | 0 | 0 |
| 29 | ಉತ್ತರಕನ್ನಡ | 88 | 4 | 0 | 40 | 44 |
| 30 | ಉಡುಪಿ | 7 | 0 | 0 | 3 | 3 |
| ಒಟ್ಟು | | **4033** | **452** | **0** | **1697** | **2150** |